ತಾಲ್ಲೂಕು	ಕನಿಷ್ಟ	ಗರಿಷ್ಟ
ಔರಾದ್	0.34	62.29
ಭಾಲ್ಕಿ	0.86	53.33
ಬಸವಕಲ್ಯಾಣ	3.92	35.36
ಬೀದರ್	0.71	38.81
ಹುಮ್ನಾಬಾದ್	1.41.	28.81.

ಈ) ಯಾವುದೇ ವೆಚ್ಚ ಮಾಡಿಲ್ಲ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆ

14 (230) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮೀಣ ಕೈಗಾರಿಕೆ ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಬೀದರ್ ಜಿಲ್ಲೆಯಲ್ಲಿರುವ ಗ್ರಾಮೀಣ ಕೈಗಾರಿಕೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು);

ಇ) ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ನೀಡುತ್ತಿರುವ ಅನುದಾನದ ಮೊತ್ತ ಎಷ್ಟು?

ಈ) ಯಾವ ಯಾವ ಯೋಜನೆಯಡಿಯಲ್ಲಿ ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿದೆ?

ಉ) ಗ್ರಾಮೀಣ ಕೈಗಾರಿಕೆಗಳನ್ನು ಪ್ರಾರಂಭಿಸುವ ಉದ್ಯಮಿಗಳಿಗೆ ಸರ್ಕಾರ ಸಹಾಯ ಧನವನ್ನು ನೀಡುತ್ತಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ನೀಡಲಾಗುತ್ತಿದೆ?

ಊ) ಪ್ರಸ್ತುತ ನೀಡುತ್ತಿರುವ ಸಹಾಯಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಋ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು ಹಾಗೂ ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಹೊಸ ಕೈಗಾರಿಕಾ ನೀತಿ 2009–14ರಲ್ಲಿ ರಾಜ್ಯದಲ್ಲಿರುವ ತಾಲ್ಲೂಕುಗಳನ್ನು ನಾಲ್ಕು ವಲಯಗಳಾಗಿ ವರ್ಗೀಕರಿಸಲಾಗಿದೆ. ವಲಯ–1 – ಅತ್ಯಂತ ಹಿಂದುಳಿದ ತಾಲ್ಲೂಕುಗಳು, ವಲಯ–2 – ಅತೀ ಹಿಂದುಳಿದ ತಾಲ್ಲೂಕುಗಳು, ವಲಯ–3 – ಹಿಂದುಳಿದ ತಾಲ್ಲೂಕುಗಳೂ, ವಲಯ–4 – ಕೈಗಾರಿಕೆಗಳಲ್ಲಿ ಮುಂದುವರೆದ ತಾಲ್ಲೂಕುಗಳು. ಅದರನ್ವಯ ಬೀದರ್ ತಾಲ್ಲೂಕನ್ನು ವಲಯ–3 ರಲ್ಲಿ ಹಾಗೂ ಉಳಿದ ತಾಲ್ಲೂಕುಗಳನ್ನು ವಲಯ–1 ರಲ್ಲಿ ವರ್ಗೀಕರಿಸಲಾಗಿದೆ. ಈ ಕೆಳಕಂಡ ಉತ್ತೇಜನ ಮತ್ತು ರಿಯಾಯಿತಿ ಗಳನ್ನು ನೀಡಲಾಗುತ್ತಿದೆ.

1. ಬಂಡವಾಳ ಹೂಡಿಕೆ ಉತ್ತೇಜನ ಸಹಾಯಧನ
2. ಮುದ್ರಾಂಕ ಶುಲ್ಕದ ವಿನಾಯಿತಿ
3. ನೋಂದಣಿ ಶುಲ್ಕದಲ್ಲಿ ರಿಯಾಯಿತಿ
4. ಭೂ ಪರಿವರ್ತನಾ ಶುಲ್ಕದ ಮಾಪಿ
5. ಪ್ರವೇಶ ತೆರಿಗೆ ವಿನಾಯಿತಿ
6. ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ
7. ತ್ಯಾಜ್ಯ ಸಂಸ್ಕರಣ ಸ್ಥಾಪನೆಗೆ ಸಹಾಯಧನ
8. ಮೌಲ್ಯವರ್ಧಿತ ತೆರಿಗೆ ಬಡ್ಡಿರಹಿತ ಸಾಲ ಸೌಲಭ್ಯ
9. ಹೊಸದಾದ ಅತಿ ಸಣ್ಣ ಉತ್ಪಾದನಾ ಘಟಕಗಳಿಗೆ ಬಡ್ಡಿ ಸಹಾಯಧನ
10. ವಿದ್ಯುತ್ ಶುಲ್ಕದ ಮೇಲಿನ ತೆರಿಗೆಯಿಂದ ರಿಯಾಯಿತಿ

ಆ) ಬೀದರ್ ಜಿಲ್ಲೆಯಲ್ಲಿ ಡಿಸೆಂಬರ್ 2009ರ ಅಂತ್ಯದವರೆಗೆ ನೋಂದಾಯಿತವಾಗಿರುವ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳ ಸಂಖ್ಯೆ 7631 ಇದ್ದು, ಗ್ರಾಮೀಣ ಕೈಗಾರಿಕೆಗಳು ಶೇ. 70 ರಷ್ಟು ಇರುತ್ತವೆ.

ಇ) ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ನೇರವಾಗಿ ಯಾವುದೇ ಅನುದಾನವನ್ನು ನೀಡುತ್ತಿಲ್ಲ. ಕೈಗಾರಿಕಾ ನೀತಿಯಂತೆ ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಶೀಲರಿಗೆ ಉತ್ತೇಜನ ರಿಯಾಯಿತಿ ಗಳನ್ನು ನೀಡಲಾಗುತ್ತಿದೆ.

ಈ) ನಿರುದ್ಯೋಗಿ ಯುವಕರು ಗ್ರಾಮೀಣಾಭಿವೃದ್ಧಿ ಹಾಗೂ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಹಾಗೂ ಇತರೆ ಸಂಸ್ಥೆಗಳಲ್ಲಿ ವೃತ್ತಿ ತರಬೇತಿ ಪಡೆದ ನಂತರ ಬ್ಯಾಂಕುಗಳ ಮೂಲಕ ಸ್ವಯಂ ಉದ್ಯೋಗಕ್ಕಾಗಿ ಕೈಗಾರಿಕಾ ಘಟಕ ಸ್ಥಾಪಿಸಲು ಸಾಲ ಪಡೆಯಬಹುದಾಗಿದೆ. ಭಾರತ ಸರ್ಕಾರದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯಡಿಯಲ್ಲಿ ಸಹ ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿದೆ.

ಉ) ರಾಜ್ಯ ಸರ್ಕಾರದ ಕೈಗಾರಿಕಾ ನೀತಿಯಂತೆ 'ಅ' ನಲ್ಲಿ ಉಲ್ಲೇಖಿಸಿರುವಂತೆ, ಉತ್ತೇಜನ ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಸ್ಥಿರಾಸ್ತಿ ಬಂಡವಾಳದ ಮೇಲೆ ಶೇ. 10 ರಿಂದ 25 ರಷ್ಟು ಬಂಡವಾಳ ಹೂಡಿಕೆ ಉತ್ತೇಜನಾ ಸಹಾಯಧನ ನೀಡಲಾಗುತ್ತಿದೆ.

ಊ) ಇರುವುದಿಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ಕಾರಂಜಾ ಜಲಾಶಯ ಯೋಜನೆಯ ಏತ ನೀರಾವರಿ ಬಗ್ಗೆ

15 (231) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ ಜಲಾಶಯ ಯೋಜನೆಯಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ಮತ್ತು ಅವು ಯಾವುವು, (ವಿವರಗಳನ್ನು ನೀಡುವುದು);

ಆ) ಈ ಯೋಜನೆಯಡಿಯಲ್ಲಿ ಪೂರ್ಣಗೊಳಿಸಿರುವ ಮತ್ತು ಬಾಕಿ ಉಳಿದಿರುವ ಏತ ನೀರಾವರಿ ಕಾಮಗಾರಿಗಳೆಷ್ಟು;

ಇ) ಈ ಯೋಜನೆಗಳನ್ನು ಪೂರ್ಣಗೊಳಿಸದೇ ಇರಲು ಕಾರಣಗಳೇನು;

ಈ) ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ; ಹಾಗಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು;